ಪ್ರಬಂಧ

# ಒಂದು ಸೊಳ್ಳೆಯ ಸ್ವಗತ



**ವೆಂಕಟೇಶ ಮಾಚಕನೂರ**

ಕಲೆ: ಗುಜ್ಜಾರ್

ನಾನೊಂದು ಯಃಕಶ್ಚಿತ್ ಸೊಳ್ಳೆ. ಮನುಷ್ಯನ ದೃಷ್ಟಿಯಲ್ಲಿ ನಾನೊಂದು ತೀರ ಕ್ಷುದ್ರ ಜೀವಿ. ನಮ್ಮ ಸಂತತಿ ಮೇಲೆ ಮನುಷ್ಯನಿಗೆ ಅಪಾರ ದ್ವೇಷ. ಹೇಗಾದರೂ ಮಾಡಿ ನಮ್ಮನ್ನು ಸಂಹರಿಸಲು ಅವನು ಸತತ ಪ್ರಯತ್ನ ಮಾಡುತ್ತಲೇ ಇರುತ್ತಾನೆ. ನಾನು ಈಗ ವಾಸವಾಗಿರುವ ಮನೆಯ ನನ್ನ ವಾಸಸ್ಥಳವಾದ ಸೋಫಾ ಸೆಟ್ ಕೆಳಗಿನ ಅಡಿಯಿಂದ ಇಷ್ಟಗಲದ ಟೀವಿಯಲ್ಲಿ ಹಣಕಿ ಹಾಕಿ ನೋಡುವಾಗ ಗೊತ್ತಾಯಿತು, ಈಗ ಎಲ್ಲೆಡೆ ಡೆಂಗಿ ಜ್ವರ ಬರುತ್ತಿದೆಯಂತೆ. ಅದಕ್ಕೆ ನಮ್ಮ ಸಂತತಿಯೇ ಕಾರಣವಂತೆ. ಈಗಾಗಲೇ ಈ ಕರುನಾಡಿನಲ್ಲಿ ಹದಿನೈದು ಸಾವಿರ ಕೇಸು ದಾಖಲಾಗಿವೆಯಂತೆ. ಕೆಲವು ಸಾವುಗಳೂ ಸಂಭವಿಸಿವೆಯಂತೆ. ಆ ಸುದ್ದಿ ವಾಚಕಿ ಅದನ್ನು ಎಷ್ಟು ರಣರೋಚಕವಾಗಿ ಹೇಳುತ್ತಿದ್ದಳು! ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ ಎನ್ನುವಂತೆ, ಎಲ್ಲದಕ್ಕೂ ನಾವೇ ಕಾರಣ ಎನ್ನುತ್ತಿದ್ದ ಆ ಸುದ್ದಿವಾಚಕಿಯನ್ನು ಎದ್ದು ಹೋಗಿ ಕಚ್ಚಿ ಬರುವಷ್ಟು ಕೋಪ ಬರುತ್ತಿತ್ತು. ಈ ಟೀವಿಗಳೇ ಎಲ್ಲ ರೋಗಗಳಿಗೆ ಮೂಲ ಕಾರಣ ಅಂತ ನಮಗೆ ಅನಿಸುತ್ತದೆ. ಹೊರಗೆ ಹೋಗದೆ ಯಾವೊತ್ತೂ ಅದರ ಮುಂದೆ ಕುಕ್ಕರು ಬಡಿದು ಕುಳಿತಿದ್ದರೆ ರೋಗ ಬರದೇ ಇನ್ನೇನಾದೀತು. ಹೇಳಿದ್ದೇ ಹೇಳುವುದು, ಹಾಡಿದ್ದೇ ಹಾಡುವುದು. ಹಾಗೆ ಮೈಮರೆತು ಕುಳಿತು ಅವರು ಟೀವಿಯಲ್ಲಿ ಕ್ರಿಕೆಟ್, ಧಾರಾವಾಹಿಗಳು, ಆ ಮಕ್ಕಳು ಕಾರ್ಟೂನ್ ನೋಡುವಾಗಲೇ ಅಲ್ಲವೇ ನಾವೊಂದಿಷ್ಟು ಜಪ್ಪಿಸಿ ಅವರ ರಕ್ತ ಹೀರಿ ಮತ್ತೆ ಮರೆಯಾಗುತ್ತೇವೆ. ಟೀವಿ ಬಹಳ ಕೆಟ್ಟದ್ದೇನಲ್ಲ.

ನಗರಪಾಲಿಕೆಯವರು ಡೆಂಗಿ ಕುರಿತು ಮೈಕ್ ಮೂಲಕ ಏನೇನೋ ಅರಚುತ್ತಾ ದಿನಾಲು ಹೋಗುವುದು ನಮ್ಮ ಕಿವಿಗೆ ಬೀಳುತ್ತದೆ. ಇದನ್ನೆಲ್ಲ ಕೇಳುತ್ತ ನಮಗೆ ನೆಮ್ಮದಿ ಇಲ್ಲವಾಗಿದೆ. ಈ ಮನುಷ್ಯ ಮೊದಲು ಮಲೇರಿಯಾ ರೋಗಕ್ಕೆ ನಮ್ಮ ಮೇಲೆ ಆಪಾದನೆ ಹೊರಿಸಿದ. ನಂತರ ಚಿಕೂನ್ ಗುನ್ಯ, ಝೀಕಾ ವೈರಸ್, ಹಳದಿ ಜ್ವರ ಎಂದು ಎಲ್ಲ ರೋಗಗಳನ್ನು ಈಗ ನಮ್ಮ ತಲೆಗೆ ಕಟ್ಟುತ್ತಿದ್ದಾನೆ. ಮಲೇರಿಯಾಕ್ಕೆ ಪ್ರತಿ ವರ್ಷ ಜಗತ್ತಿನಲ್ಲಿ ನಾಲ್ಕು ಲಕ್ಷ ಜನ ಬಲಿಯಾಗುತ್ತಾರಂತೆ! ಡೆಂಗಿಯಿಂದ ಜಗತ್ತಿನಾದ್ಯಂತ ವರ್ಷಕ್ಕೆ ಇಪ್ಪತ್ತೈದು ಸಾವಿರ ಜನ ಸಾಯುತ್ತಾರಂತೆ. ನಗರ ಪಾಲಿಕೆಯವರು ಮನೆ ಹೊರಗಡೆಗೆ ಫಾಗಿಂಗ್ ಮಾಡುತ್ತಿದ್ದಾರಂತೆ – ಮನೆಯ ಯಜಮಾನ, ಯಜಮಾನಿಗೆ ಹೇಳುತ್ತಿದ್ದ.

ಮನೆಯ ಒಳಗಡೆಯೂ ನಾವು ಕಂಡ ಕೂಡಲೇ ಮನೆ ಮಂದಿಯಲ್ಲ ಬೆಚ್ಚಿ ಬೀಳುತ್ತಿದ್ದಾರೆ. ನಮ್ಮನ್ನು ಅಟ್ಟಿಸಿಕೊಂಡು ಬರುತ್ತಾರೆ. ಹೀಗಾದರೆ ನಮ್ಮಂಥ ಬಡ ಜೀವಿಗಳು ಬದುಕುವುದಾದರೂ ಹೇಗೆ? ಅಷ್ಟಕ್ಕೂ ನಾವು ನಮ್ಮ ಹೊಟ್ಟೆಪಾಡಿಗೆ ಒಂದಿಷ್ಟು ರಕ್ತ ಹೀರುವುದು ತಪ್ಪೇ. ನಮ್ಮ ಆಹಾರವನ್ನು ಆ ದೇವರು ಈ ಮನುಷ್ಯನ ಶರೀರದಲ್ಲಿ ಏಕಾದರೂ